# ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,

## ತಿ. ನರಸೀಪುರ

## ಸಿ ಸಿ ಸಂಖ್ಯೆ: 364/2023

## ದೋಷಾರೋಪಣೆ

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ ನರಸೀಪುರ ಆದ ನಾನು

1. ಕಬ್ಬಾಳ ಉಃ ಚಂದು ಬಿನ್ ರಮೇಶ
   26 ವರ್ಷ, ವಾಸಃ ಏಕಲವ್ಯ ನಗರ,
   ಮೈಸೂರು ನಗರ.

2. ರಘು ಬಿನ್ ಲೇ ಕೃಷ್ಣಪ್ಪ
   38 ವರ್ಷ, ವಾಸಃ ಏಕಲವ್ಯ ನಗರ,
   ಮೈಸೂರು ನಗರ. (**ಪ್ರತ್ಯೇಕಿಸಲಾಗಿದೆ**).

3. ಮಂಜು ಉಃ ಮಂಜುನಾಥ ಉಃ ಮಂಜುನಾಥ್
   ಬಿನ್ ಲೇ ನಂಜುಂಡಪ್ಪ,
   30 ವರ್ಷ, ವಾಸಃ ಏಕಲವ್ಯ ನಗರ,
   ಮೈಸೂರು ನಗರ.(**ಪ್ರತ್ಯೇಕಿಸಲಾಗಿದೆ**).

4. ಕೃಷ್ಣ ಬಿನ್ ಲೇ ನಂಜುಂಡ
   20 ವರ್ಷ, ವಾಸಃ ಬನ್ನಿಮಂಟಪ, ಯಲ್ಲಮ್ಮ
   ಕಾಲೋನಿ, ಮೈಸೂರು ನಗರ. (**ಪ್ರತ್ಯೇಕಿಸಲಾಗಿದೆ**).

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಏನೆಂದರೇ:–

ಮೊದಲನೆಯದಾಗಿ, ದಿನಾಂಕ 16.06.2022 ರಂದು ರಾತ್ರಿ ಸಮಯದಲ್ಲಿ, ತಿ.ನರಸೀಪುರ ಪೋಲಿಸ್ ಠಾಣಾ ವ್ಯಾಪ್ತಿಯ, ಮೂಗೂರು ಗ್ರಾಮದ ಶ್ರೀ ತ್ರಿಪುರದೇವಸ್ಥಾನದಲ್ಲಿ ಕಳ್ಳತನ ಮಾಡಲು ಆರೋಪಿತರಾದ ನೀವು ದೇವಸ್ಥಾನದ ಹಿಂಭಾಗದ ಗ್ರೀಲ್ ಗೇಟ್‌ಗೆ ಅಳವಡಿಸಿದ್ದ ಬೀಗ ಮುರಿದು, ಕಳ್ಳತನ ಮಾಡುವ ಉದ್ದೇಶದಿಂದ ದೇವಸ್ಥಾನಕ್ಕೆ ಅತಿಕ್ರಮ ಪ್ರವೇಶ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 457 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸದರಿ ದೇವಸ್ಥಾನದ ಹುಂಡಿಯಲ್ಲಿದ್ದ ರೂ.3,16,505/- ನಗದು, 1) ಚಿನ್ನದ ಮಾದರಿಯ ಒಂದು ಜೊತೆ ಹುಬ್ಬುಗಳು, 2) ಒಂದು ಕೆಂಪು ಹರಳು ಇರುವ ಚಿನ್ನದ ಮಾದರಿಯ ಒಂದು ಹಣೆಬೊಟ್ಟು, 3) ಒಂದು ಚಿನ್ನದ ಮಾದರಿಯ ಎರಡು ಕೆಂಪು ಹರಳು ಇರುವ ಒಂದು ಚಿಕ್ಕ ತಾಳಿ, 4) ಒಂದು ಕೆಂಪು ಹರಳಿನ ಆರು ಸಣ್ಣ ಬಿಳಿ ಹರಳಿನ ಹಿತ್ತಾಳೆ ತಂತಿಗೆ ಪೋಣಿಸಿರುವ ಒಂದು ಕೆಂಪು ಮಣಿ, ಎರಡು ಚಿನ್ನದ ಮಾದರಿಯ ಟ್ಯೂಬ್, ಎರಡು ಚಿನ್ನದ ಮಾದರಿಯ ಗುಂಡು ಒಳಗೊಂಡಿರುವ ಚಿನ್ನದ ಮಾದರಿ ಹಗ್ಗದ ಹುರಿ ಚೈನ್ ಮತ್ತು ಅದಕ್ಕೆ ಅಳವಡಿಸಿರುವ ಒಂದು ದೊಡ್ಡ ತಾಳಿ, 5) ಚಿನ್ನದ ಆಭಯಹಸ್ತ, 6) ಚಿನ್ನದ ವರಾಹ ಹಸ್ತ, 7) ಮೂಗೂತಿ, 8) ಒಂದು ಚಿನ್ನದ ಮಾದರಿಯ ಲಕ್ಷ್ಮೀ ಪದಕ, ಮೂರು ಕಪ್ಪು ಮಣಿ,

ಒಂಬತ್ತು ಮತ್ತು ಒಂಬತ್ತು (ಹದಿನೆಂಟು) ಲಕ್ಷ್ಮೀ ಚಿತ್ರವಿರುವ ಕಾಸು ಒಳಗೊಂಡಿರುವ ಗುಂಡಿನ ಚಿನ್ನದ ಮಾದರಿ ಸರಗಳನ್ನು ಕಳ್ಳತನ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ 03.07.2025.

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ. ನರಸೀಪುರ.**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ.**

**ಸಿ ಸಿ ಸಂಖ್ಯೆ: 364/2023**

**ದೋಷಾರೋಪಣೆ**

1. ಕಬ್ಬಾಳ ಉಃ ಚಂದು ಬಿನ್ ರಮೇಶ
   26 ವರ್ಷ, ವಾಸಃ ಏಕಲವ್ಯ ನಗರ,
   ಮೈಸೂರು ನಗರ.

2. ರಘು ಬಿನ್ ಲೇ ಕೃಷ್ಣಪ್ಪ
   38 ವರ್ಷ, ವಾಸಃ ಏಕಲವ್ಯ ನಗರ,
   ಮೈಸೂರು ನಗರ. (**ಪ್ರತ್ಯೇಕಿಸಲಾಗಿದೆ**).

3. ಮಂಜು ಉಃ ಮಂಜುನಾಥ ಉಃ ಮಂಜುನಾಥ್
   ಬಿನ್ ಲೇ ನಂಜುಂಡಪ್ಪ,
   30 ವರ್ಷ, ವಾಸಃ ಏಕಲವ್ಯ ನಗರ,
   ಮೈಸೂರು ನಗರ.(**ಪ್ರತ್ಯೇಕಿಸಲಾಗಿದೆ**).

4. ಕೃಷ್ಣ ಬಿನ್ ಲೇ ನಂಜುಂಡ
   20 ವರ್ಷ, ವಾಸಃ ಬನ್ನಿಮಂಟಪ, ಯಲ್ಲಮ್ಮ
   ಕಾಲೋನಿ, ಮೈಸೂರು ನಗರ. (**ಪ್ರತ್ಯೇಕಿಸಲಾಗಿದೆ**).

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆ: ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 03.07.2025.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ತಿ.ನರಸೀಪುರ.